## ಕಥೆ

ಸಾವಿಗೂ ಬದುಕಿಗೂ, ಅಂತ್ಯಕ್ಕೂ ಆದಿಗೂ ಅದೆಷ್ಟು ಹತ್ತಿರ!

ಕೈಬೀಸಿ ಕರೆಯುತ್ತಿದ್ದ ಜನರತ್ತ ಕಾಲು ಸರಿಸಿದೆ. ಆಗಲಿಲ್ಲ. ಮತ್ತೆ ಪ್ರಯತ್ನಿಸಿದೆ, ನಾಲ್ಕು ಹೆಜ್ಜೆ ನಡೆದೆ, ಕುಸಿದೆ. ಇಲ್ಲಿಂದಾಚೆಗೆ ಹೊಗಲು ನನ್ನಿಂದಾಗದು. ನನ್ನ ಕಾಲುಗಳೀಗ ಸೋತಿವೆ, ಸತ್ತೇ ಹೋಗಿವೆ. ಹತಾಶೆಯಲ್ಲಿ ಕಣ್ಣು ಮುಚ್ಚಿದೆ. ಇನ್ನು ನನ್ನಿಂದೇನೂ ಆಗದು. ಸಾವು ಮತ್ತು ಬದುಕುಗಳಲ್ಲಿ ಯಾವುದು ಮೊದಲು ನನ್ನ ಬಳಿ ಬರುತ್ತದೋ ಬರಲಿ.

ಎಡದಲ್ಲಿ ಯಾರೋ ಮಾತಾಡಿದರು, ಬಲದಲ್ಲಿ ಯಾರೋ ಮಾರ್ದನಿ ಕೊಟ್ಟರು. ಬೆಚ್ಚಿ ಕಣ್ಣು ತೆರೆದೆ. ಎಡಬಲ ನೋಡಿದೆ. ಎರಡೂ ಕಡೆಗಳಿಂದ ಜನ ಬಂದು ನನ್ನ ಸುತ್ತಲೂ ನೆರೆದರು. “ಯಾರು ನೀನು?” ಅಂದರು. ನಾನು ಅವರಿಗೆದುರಾದೆ. “ನಾನೊಬ್ಬ ಅಲೆಮಾರಿ” ಅಂದೆ.

* * *

ಅವರಲ್ಲಿ ಆಟವಾಡುತ್ತಿದ್ದ ಬಾಲಕ ಬಾಲಕಿಯರಲ್ಲದೇ ಎಳೆಹಸುಳೆಗಳಿಗೆ ಹಾಲೂಡಿಸುತ್ತಿದ್ದ ಹೆಂಗಸರಿಂದ ಹಿಡಿದು ಸೂರ್ಯನಿಗಡ್ಡವಾಗಿ ನಿಂತು ಅವರಿಗೆ ನೆರಳು ಮಾಡಿದ್ದ ಗಂಡಸರಾಚೆಗೆ ಉದ್ದುದ್ದನೆಯ ಬಿಳಿ ಗಡ್ಡದ ಮುದುಕರೂ, ಬಿಳಿಗೂದಲ ಗಂಟುಗಳ ಮುದುಕಿಯರೂ ಸಹಸ್ರ ಸಹಸ್ರ ಸಂಖ್ಯೆಯಲ್ಲಿದ್ದರು. ಅವರಿಂದ ಬಂದದ್ದು ಒಕ್ಕೊರಲಿನ ಬೇಡಿಕೆ, ನಮ್ಮನ್ನೂ ಕರೆದುಕೊಂಡು ನಡೆ ಎಂದು.

ನಡೆಯಲಾಗದಾಗ ನಾನು ಅಲೆಮಾರಿ ಎಂದು ಹೇಳಿಕೊಂಡದ್ದೇ ನನ್ನ ತಪ್ಪೇ?

ಹೌದು, ಹಾಗೇ ಇರಬೇಕು.

ನನ್ನ ಕಾಲುಗಳಿಗೆ ನಡೆಯಲಾಗುತ್ತಿರಲಿಲ್ಲ, ನಿಜ. ಆದರೆ, ನನ್ನ ಮನಸ್ಸು ಹಾರುವುದು ಇನ್ನೂ ಮರೆತಿರಲಿಲ್ಲ.

“ನಾನು ಅಲೆಮಾರಿಯಾಗಿದ್ದೆ” ಅಂದೆ ಮೆಲ್ಲಗೆ. “ಈಗ ನಾನು ನೆಲೆಯೂರಲು ನೋಡುತ್ತಿದ್ದೇನೆ.” ಮತ್ತಷ್ಟು ಮೆಲ್ಲಗೆ, ನಿಧಾನವಾಗಿ ಹೇಳಿದೆ.

ಇದಿರಿನಲ್ಲೀಗ ನಗೆ

ಆ ನಗೆ ಯಾಕಾಗಿ? ಅಣಕವೇ? ಗೊಂದಲಗೊಂಡೆ.

ನಗೆ ನಿಂತಿತು. ಮಗುವೊಂದು ಮಾತಾಡಿತು: “ನೀನೀಗ ಪರೀಕ್ಷೆಯಲ್ಲಿ ಉತ್ತೀರ್ಣನಾದೆ.” ಗಂಡಸೊಬ್ಬ ಹೇಳಿದ: “ನೀನೀಗ ಅನುಭವಗಳಿಂದ ಪಾಠ ಕಲಿತಿದ್ದೀಯ ಎಂದಾಯ್ತು ಬಿಡು.”

“ನಮಗೆ ಎಲ್ಲಿಗೂ ಹೊಗಬೇಕಾಗಿಲ್ಲ. ನೀನೂ ಹೋಗುವುದು ಅಗತ್ಯವಿಲ್ಲ. ನೀನಿಗ ನಮ್ಮವನು. ಬಾ, ನಮ್ಮ ಜತೆಗೂಡು. ನೀನೂ ನಮ್ಮವನೇ ಬಿಡು. ನಮ್ಮ ಜತೆಗೂಡು.” ಹಿರಿಯನೊಬ್ಬ ನಗುತ್ತಾ ಹೇಳಿದ. ಅವನ ಕೈಯಾಡಿಸುವಿಕೆಗೆ ಸ್ಪಂದಿಸಿದ ಜನ ಸ್ತೋಮ ಕೆಳಗೆ ಕೂತಿತು. “ಒಲೆ ಹೂಡಿ” ಅಂದ ವೃದ್ಧ. “ಅಪ್ಪಣೆ ಪ್ರಭೂ” ಅಂದಿತು ಜನಸ್ತೋಮ.

ಅಲ್ಲಿ ಒಲೆ, ಒಲೆಯಲ್ಲಿ ಸೌದೆ, ಸೌದೆಗಳ ತುರಿಗಳಲ್ಲಿ ಬೆಂಕಿ, ಬೆಂಕಿಯ ಕುಡಿಗಳಿಗಂಟಿದ ಮಣ್ಣಿನ ಮಡಕೆಗಳು, ಅವುಗಳ ಮೇಲೆ ಮಣ್ಣಿನದೇ ಮುಚ್ಚಳಗಳು.

ಎಲ್ಲೆಲ್ಲೂ ಅದೇ ನೋಟ. ಇಷ್ಟು ಒಲೆಗಳನ್ನು, ಇಷ್ಟು ಮಡಕೆಗಳನ್ನು ನಾನು ನನ್ನ ಅಲೆದಾಟದಲ್ಲಿ ಎಲ್ಲೂ ಕಂಡಿರಲಿಲ್ಲ.

ಒಲೆಯೆಂದರೆ ನೆಲೆ. ಮಡಕೆಯೆಂದರೆ ಬದುಕು.

“ನಾನು ಈ ಭೂಮಿಯದೇ ಒಂದು ಭಾಗದಲ್ಲಿದ್ದೇನೆಯೇ? ಅಥವಾ... ಅನುಮಾನವಾಯಿತು. ಹೆಗಲು ಜಿಗುಟಿಕೊಂಡೆ. ನೋವಾಯಿತು. ಹಿಂದೆಯೇ ಸಮಾಧಾನ. ಸುತ್ತಲೂ ಹರಡಿದ ಪರಿಮಳದಲ್ಲಿ ನನಗೆ ಮಂಪರು ಕವಿದಂತೆನಿಸಿತು.

“ಅಡಿಗೆಯಾಯಿತು.” ಯಾರೋ ಮೆಲ್ಲಗೆ ತಟ್ಟಿ ಎಬ್ಬಿಸಿದರು. ಕಣ್ಣು ಬಿಟ್ಟೆ. ಯಾರೂ ಇರಲಿಲ್ಲ. ಆದರೆ, ಯಾವುದೋ ಗುರುತಾಗದ ಅಡಿಗೆಯ ಪರಿಮಳ ಸುತ್ತಲೂ ಗಾಢವಾಗಿ ಹರಡಿತ್ತು. ನನ್ನ ಹೊಟ್ಟೆ ತುಂಬಿತ್ತು. ಇಷ್ಟದ ಊಟವನ್ನು ಕಂಠಮಟ್ಟ ಉಂಡ ಸಂತೃಪ್ತಿ ನನ್ನೊಳಗೆ ತುಂಬಿಕೊಮಡಿತ್ತು.

ಇದೇನು ಮಾಯೆ!

ಕಣ್ಣರಳಿಸಿ ಸುತ್ತಲೂ ನೊಡಿದೆ. ತಲೆಯ ಮೇಲೆ ಕೈಯೊಂದು ಮೃದುವಾಗಿ ಆಡಿತು.

ನನಗೆ ಭಯವಾಗಲಿಲ್ಲ. ಈ ಅನುಭವ ಹೊಸದೆನಿಸಿತು. ನಿಧಾನವಾಗಿ ಹಿಂದೆ ತಿರುಗಿದೆ. ಉದ್ದ ಗಡ್ಡ ಮೀಸೆ, ತಲೆಗೂದಲಿನ ವೃದ್ಧನೊಬ್ಬ ಮುಗುಳುನಗುತ್ತಿದ್ದ.

ಅವನ ಕಾಂತಿಯುತ ಕಣ್ಣುಗಳು ನನ್ನ ಮೇಲೆ